# ಕರ್ನಾಟಕ ಸರ್ಕಾರ

ಸಂಖ್ಯೆ: ಬಿಡಿಸ್.ಎಎಲ್ಎನ್:ಎಸ್ಆರ್(ಎಸ್): 189 /2003-04

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ, ಬೆಂಗಳೂರು
ದಿನಾಂಕ : 14.10.2003

67

## : ಅಧಿಕೃತ ಜ್ಞಾಪನ :

ವಿಷಯ: ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಮಲ್ಲಸಂದ್ರ ಗ್ರಾಮದ ಸರ್ವೆ ನಂಬರ್ 1/1 ರಲ್ಲಿ 3 ಎಕರೆ 09 ಗುಂಟೆ, ಸ.ನಂ.1/2ರಲ್ಲಿ 3 ಎಕರೆ 30 ಗುಂಟೆ ಮತ್ತು ಸ.ನಂ.1/2ಬಿ ರಲ್ಲಿ 4 ಎಕರೆ 10 ಗುಂಟೆ ಒಟ್ಟು 11 ಎಕರೆ 09 ಗುಂಟೆ (ಒಟ್ಟು ಹನ್ನೊಂದು ಎಕರೆ ಒಂಬತ್ತು ಗುಂಟೆ) ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀಮತಿ ರಾಜಲಕ್ಷ್ಮಿ ರವರು ಸಲ್ಲಿಸಿರುವ ಅರ್ಜಿ ದಿನಾಂಕ : 28-07-2003

ಉಲ್ಲೇಖ: 1) ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕುರವರ ವರದಿ ಸಂಖ್ಯೆ ಎಎಲ್ಎನ್: ಎಸ್ಆರ್ 62 / 2003-04 ದಿನಾಂಕ : 29-08-2003.

2) ಭೂ ಪರಿವರ್ತನಾ ಶುಲ್ಕ ರೂ.6,11,202-00 ಮತ್ತು ಅನಧಿಕೃತ ಕಟ್ಟಡಕ್ಕೆ ಕಟ್ಟಡಕ್ಕೆ ದಂಡ ರೂ.2,300.00 ಹಾಗೂ ಪೋಡಿ ಶುಲ್ಕ ರೂ.165.00 ಒಟ್ಟು ಮೊತ್ತ ರೂ.6,13,667.00 ಗಳನ್ನು : ಚಲನ್ ನಂಬರ್ 99 ದಿನಾಂಕ : 01.10.2003 ರಂದು ಎಸ್.ಬಿ.ಎಂ.ಗೆ ಅರ್ಜಿದಾರರು ಜಮಾ ಮಾಡಿರುತ್ತಾರೆ.

* * *

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 95(2), 95(4) ಮತ್ತು 95(7) ರ ಷರತ್ತುಗಳು ಹಾಗೂ ಷರತ್ತುಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994ರ ನಿಯಮ 107(1) ರಂತೆ ಎಕರೆ ಒಂದಕ್ಕೆ ರೂ.54,450.00 (ರೂಪಾಯಿಗಳು ಐವತ್ತನಾಲ್ಕು ಸಾವಿರದ ನಾಲ್ಕು ನೂರ ಐವತ್ತು ಮಾತ್ರ) ಗಳಂತೆ ಅರ್ಜಿದಾರರು ಉಲ್ಲೇಖ (2)ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಅರ್ಜಿದಾರರಾದ ಶ್ರೀಮತಿ ರಾಜಲಕ್ಷ್ಮಿ ರವರ ಅರ್ಜಿಯನ್ನು ಪರಿಗಣಿಸಿ ಉತ್ತರಹಳ್ಳಿ ಹೋಬಳಿ, ಮಲ್ಲಸಂದ್ರ ಗ್ರಾಮದ ಸರ್ವೆ ನಂಬರ್ 1/1 ರಲ್ಲಿ 3 ಎಕರೆ 09 ಗುಂಟೆ, ಸ.ನಂ.1/2ರಲ್ಲಿ 3 ಎಕರೆ 30 ಗುಂಟೆ ಮತ್ತು ಸ.ನಂ.1/2ಬಿ ರಲ್ಲಿ 4 ಎಕರೆ 10 ಗುಂಟೆ ಒಟ್ಟು 11 ಎಕರೆ 09 ಗುಂಟೆ (ಒಟ್ಟು ಹನ್ನೊಂದು ಎಕರೆ ಒಂಬತ್ತು ಗುಂಟೆ) ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1. ಈ ಭೂಮಿಯ ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ, ಅಭಿವೃದ್ಧಿ ಮಂಡಳಿ : ಗ್ರಾಮ ಪಂಚಾಯಿತಿಗಳಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

2. ಈ ಪರಿವರ್ತಿತ ಜಮೀನನ್ನು ವಾಸದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

3. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಅಭಿವೃದ್ಧಿ ಮಂಡಳಿ : ಸಿ.ಎಂ.ಸಿ:ಟಿ.ಎಂ.ಸಿ : ಮಾಲಿನ್ಯ ನಿಯಂತ್ರಣಾ ಮಂಡಳಿ : ಗ್ರಾಮ ಪಂಚಾಯಿತಿಗಳಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

4. ಇತರೆ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಖಾಲಿ ಜಾಗ ಇತ್ಯಾದಿಗಳನ್ನು ಅಭಿವೃದ್ಧಿ ಮಂಡಳಿ : ಸಿಎಂಸಿ:ಟಿಎಂಸಿ: ಮಾಲಿನ್ಯ ನಿಯಂತ್ರಣಾ ಮಂಡಳಿ : ಗ್ರಾಮ ಪಂಚಾಯಿತಿರವರಿಂದ ಅನುಮೋದಿಸಿದ ಬಡಾವಣೆ ನಕ್ಷೆಪ್ರಕಾರ ಹಾಗೂ ನಿರ್ದಿಷ್ಟ ಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿತಕ್ಕದ್ದು.

5. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತಿಯ ಒದಗಿಸಿಕೊಡುವುದು. ಅರ್ಜಿದಾರರು ಜವಾಬ್ದಾರಿಯಾಗಿರುತ್ತದೆ

6. ಭೂ ಪರಿವರ್ತನೆ ಮಂಜೂರಿ ಕೋರಿರುವ ಜಮೀನಿನ ವಿಚಾರದಲ್ಲಿ ವಿವಿಧ ನ್ಯಾಯಾಲಯಗಳಲ್ಲಿ ಇರುವ ಪ್ರಕರಣಗಳಿಗೆ ಈ ಪ್ರಾಧಿಕಾರ ಸಂಬಂಧಿಸಿದ್ದಲ್ಲ.

7. ಭೂಸ್ವಾಧೀನ ನಡವಳಿಕೆಗಳೇನಾದರೂ ನಡೆದಿದ್ದಲ್ಲಿ ಈ ಪ್ರಾಧಿಕಾರ ಸಂಬಂಧಿಸಿದ್ದಲ್ಲ.

8. ಈ ಜಮೀನಿಗೆ ತಾಕು ಫೂಟ್ ಖರಾಬ್ ಜಮೀನಿನಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 67ರಂತೆ ಸರ್ಕಾರಕ್ಕೆ ಕಾಯ್ದಿರಿಸತಕ್ಕದ್ದು.

9. ಸರ್ಕಾರಕ್ಕೆ ಆದೇಶ ಸಂಖ್ಯೆ : ಪಿಡಬ್ಲ್ಯುಡಿ 7556-665 ಆರ್ ಮತ್ತು ಬಿ-6-54-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ಸಂ.ಪಿ 1:7 (11) 67, ದಿನಾಂಕ : 1-1-1966ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿಗುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ, ರಸ್ತೆಯ ಮಧ್ಯಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ, ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

10. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 96ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೆ, ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೇದಾರರಿಂದ ವಸೂಲಿ ಮಾಡಲಾಗುವುದು.

### ಷೆಡ್ಯೂಲ್ ವಿವರ

ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಮಲ್ಲಸಂದ್ರ ಗ್ರಾಮದ ಸರ್ವೆ ನಂಬರ್ 1/1 ರಲ್ಲಿ 3 ಎಕರೆ 09 ಗುಂಟೆ, ಸ.ನಂ.1/2ರಲ್ಲಿ 3 ಎಕರೆ 30 ಗುಂಟೆ ಮತ್ತು ಸ.ನಂ.1/2ಬಿ ರಲ್ಲಿ 4 ಎಕರೆ 10 ಗುಂಟೆ ಒಟ್ಟು 11 ಎಕರೆ 09 ಗುಂಟೆ (ಒಟ್ಟು ಹನ್ನೊಂದು ಎಕರೆ ಒಂಬತ್ತು ಗುಂಟೆ) ವಿಸ್ತೀರ್ಣಕ್ಕೆ ಭೂ ಪರಿವರ್ತಿತ ಜಮೀನಿಗೆ ಚಕ್ಕುಬಂದಿ :

| | | |
|---|---|---|
| ಪೂರ್ವಕ್ಕೆ | :: | ವಾಜರಹಳ್ಳಿ ರಸ್ತೆ |
| ಪಶ್ಚಿಮಕ್ಕೆ | :: | ಮಂಜುನಾಥ್ ಮತ್ತು ಸ್ವಾಮಿರವರ ಜಮೀನು |
| ಉತ್ತರಕ್ಕೆ | :: | ವಾಜರಹಳ್ಳಿ ಗಡಿ ಹಾಗೂ ಕರಿಯಪ್ಪನವರ ಜಮೀನು |
| ದಕ್ಷಿಣಕ್ಕೆ | :: | ಸ.ನಂ.1/5 ರ ರವಿ ರೆಡ್ಡಿ ರವರ ಜಮೀನು |

(ಸಿ.ಕೃಷ್ಣೇಗೌಡ)
ವಿಶೇಷ ಜಿಲ್ಲಾಧಿಕಾರಿ (ಕಂ.) ಬೆಂಗಳೂರು (ಎ)


ಜಿಲ್ಲಾಧಿಕಾರಿಗಳ ಪರವಾಗಿ

**ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ.**

1) ತಹಶೀಲ್ದಾರ್ ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ಮೂಲ ಆದೇಶ ಹಾಗೂ ಚಲನ್‌ನೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ಭೂ ಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಕಂಪ್ಯೂಟರ್ ಆರ್.ಟಿ.ಸಿ ಯಲ್ಲಿ ನಮೂದಿಸತಕ್ಕದ್ದು. ಮತ್ತು ಈ ಜಮೀನಿಗೆ ಖಾತೇದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸಲಾಗುವುದು.
2) ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ.
3) ಉಪನಿರ್ದೇಶಕರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ ಬೆಂಗಳೂರು ಉಪ ವಿಭಾಗ.
4) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
5) ಅರ್ಜಿದಾರರಾದ ಶ್ರೀಮತಿ ರಾಜಲಕ್ಷ್ಮಿ ಕೋಂ ಎಂ.ಕೃಷ್ಣಪ್ಪ, ನಂ.1921, 30ನೇ ಅಡ್ಡರಸ್ತೆ, 13ನೇ ಮುಖ್ಯರಸ್ತೆ, ಬನಶಂಕರಿ, ಬೆಂಗಳೂರು-50, ರವರಿಗೆ ದೃಢೀಕೃತ ಅಂಚೆ ಮೂಲಕ
6) ಹೆಚ್ಚಿನ ಪ್ರತಿ.

ಜಿಲ್ಲಾಧಿಕಾರಿಗಳ ಪರವಾಗಿ

ಗ್ರಾ. ಮ:- ಮಲ್ಲಸಂದ್ರ ಹೋಬಳಿ:- ಯಶವಂತಪುರ ತಾಲ್ಲೂಕು:- ಬೆಂಗಳೂರು ಉತ್ತರ.
ಸರ್ವೆ ನಂ. 1/1, 1/2A, ಮತ್ತು 1/2B ರ ಹದ್ದುಬಸ್ತು ನಕ್ಷೆ.




Attested
13/…/03

ಜಿಲ್ಲಾಧಿಕಾರಿಗಳ ಪರವಾಗಿ
ಬೆಂಗಳೂರು ಜಿಲ್ಲೆ

ಸರ್ವೇಯರ್
ಬೆಂಗಳೂರು ಉತ್ತರ ತಾಲ್ಲೂಕು
ಬೆಂಗಳೂರು

ಸಹಾಯಕ ನಿರ್ದೇಶಕರು
ಭೂಮಾಪನ ದಾಖಲೆಗಳು
ಬೆಂಗಳೂರು